# ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:30-07-2015ರ ನಡವಳಿಗಳು

## ವಿಷಯದ ಸಂಖ್ಯೆ : 144 / 2015-16

**ವಿಷಯ:** ಇಲಾಖಾ ಪರೀಕ್ಷೆಗಳನ್ನು ನಿಗಧಿತ ಅವಧಿಯಲ್ಲಿ ತೇರ್ಗಡೆ ಹೊಂದದೇ ಇರುವ ವಿವಿಧ ವೃಂದದ ಪಾಲಿಕೆಯ ಅಧಿಕಾರಿ / ನೌಕರರುಗಳ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸುವ ಬಗ್ಗೆ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳು ಸುಮಾರು 3 ವರ್ಷಗಳಿಂದ 16 ವರ್ಷಗಳವರೆಗೆ ಇಲಾಖಾ ಪರೀಕ್ಷೆಗಳನ್ನು ನಿಗದಿತ ಅವಧಿಯಲ್ಲಿ ತೇರ್ಗಡೆ ಹೊಂದದೇ, ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಿಕೊಳ್ಳದ ಒಟ್ಟು 63 ಅಧಿಕಾರಿ / ನೌಕರರುಗಳು ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಲು ಕೋರಿರುತ್ತಾರೆ.

ಪರೀಕ್ಷಾರ್ಥ ಸೇವಾವಧಿಯನ್ನು ಘೋಷಿಸಲು 1977ರ ಕರ್ನಾಟಕ ಸಿವಿಲ್ ಸೇವೆಗಳ (ಪರೀಕ್ಷಾರ್ಥ) ನಿಯಮಗಳಲ್ಲಿ ಈ ಕೆಳಕಂಡಂತೆ ಇರುತ್ತದೆ.

ನಿಯಮ 4. ಪ್ರೊಬೇಷನ್ ಅವಧಿಯನ್ನು ವಿಸ್ತರಿಸುವುದ ಅಥವಾ ಕಡಿತಗೊಳಿಸುವುದು:-

(1) ಪ್ರೊಬೇಷನ್ ಅವಧಿಯನ್ನು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ,

(i) ರಾಜ್ಯಪಾಲರು ಅಥವಾ ಸರ್ಕಾರವು, ಅವರು ಅಥವಾ ಅದು ಯುಕ್ತವೆಂದು ಭಾವಿಸಬಹುದಾದಷ್ಟು ಅವಧಿಯವರೆಗೆ;

(ii) ಯಾವುದೇ ಇತರ ನೇಮಕ ಪ್ರಾಧಿಕಾರವು, ನಿರ್ದಿಷ್ಟಪಡಿಸಿದ ಪ್ರೊಬೇಷನ್ ಅವಧಿಯ ಅರ್ಧಕ್ಕಿಂತ ಹೆಚ್ಚಾಗದಷ್ಟು ಅವಧಿಯವರೆಗೆ ವಿಸ್ತರಿಸಬಹುದು.

ಪರಂತು, ಹಾಗೆ ನಿರ್ದಿಷ್ಟಪಡಿಸಿದ ಅಥವಾ ವಿಸ್ತರಿಸಿದ ಪ್ರೊಬೇಷನ್ ಅವಧಿಯೊಳಗೆ ಪ್ರೊಬೇಷನರನು, ಪ್ರೊಬೇಷನ್ ಅವಧಿಯಲ್ಲಿ ತೇರ್ಗಡೆಯಾಗಬೇಕಾಗಿರುವ ಯಾವುದೇ ಪರೀಕ್ಷೆಗಳು ಅಥವಾ ಉಪ ಪರೀಕ್ಷೆಗಳಿಗೆ ಹಾಜರಾಗಿದ್ದರೆ ಮತ್ತು ಅವುಗಳ ಫಲಿತಾಂಶವು ಅಂಥ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ತಿಳಿದುಬರದಿದ್ದರೆ, ಆಗ ಪ್ರೊಬೇಷನ್ ಅವಧಿಯನ್ನು ಅಂಥ ಪರೀಕ್ಷೆಗಳು ಅಥವಾ ಉಪ ಪರೀಕ್ಷೆಗಳ ಅಥವಾ ಇವುಗಳ ಪೈಕಿ ಯಾವ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಲು ವಿಫಲನಾಗಿರುವನೋ ಅವುಗಳ ಫಲಿತಾಂಶಗಳು ಪ್ರಕಟವಾಗುವವರೆಗೆ ವಿಸ್ತರಿಸಲಾಗಿದೆಯೆಂದು ಭಾವಿಸತಕ್ಕದ್ದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರೀಕ್ಷಾರ್ಥ ಸೇವಾವಧಿ ಘೋಷಿಸಿಕೊಳ್ಳದ ಅಧಿಕಾರಿ / ನೌಕರರುಗಳನ್ನು ಪರೀಕ್ಷಾರ್ಥ ಸೇವಾವಧಿಯನ್ನು ಘೋಷಿಸಲು ಸರ್ಕಾರದ ಅನುಮೋದನೆಯನ್ನು ಕೋರಲಾಗಿದ್ದು, ಈ ಕೆಳಕಂಡಂತೆ ಸರ್ಕಾರವು ಆದೇಶ ನೀಡಿರುತ್ತದೆ.

ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ದಿನಾಂಕ:04-05-2009ರ ಪತ್ರದ ಉದ್ಧೃತ ಭಾಗದಲ್ಲಿ 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ, ದ್ವಿತೀಯ ದರ್ಜೆ ಸಹಾಯಕರಿಗೆ ಆಯುಕ್ತರು ನೇಮಕಾತಿ ಪ್ರಾಧಿಕಾರಿಯಾಗಿರುತ್ತಾರೆ. ಆದ್ದರಿಂದ ಅಂತಹ ಪ್ರಕರಣಗಳಲ್ಲಿ ಪಾಲಿಕೆಯೇ ಒಂದು ನಿರ್ಧಾರವನ್ನು ತೆಗೆದುಕೊಳ್ಳಬಹುದಾಗಿರುತ್ತದೆ' ಎಂದಿರುತ್ತದೆ.

............................2

1977ರ ಕೆ.ಸಿ.ಎಸ್ (ಪರೀಕ್ಷಾರ್ಥ) ನಿಯಮಾವಳಿಗಳ ನಿಯಮ 4(1) ರನ್ವಯ ಪರೀಕ್ಷಾರ್ಥ ಸೇವಾವಧಿಯನ್ನು 1 ವರ್ಷದವರೆಗೆ ವಿಸ್ತರಿಸಲು ನೇಮಕಾತಿ ಪ್ರಾಧಿಕಾರಿಯಾದ ಪಾಲಿಕೆ ಆಯುಕ್ತರಿಗೆ ಅಧಿಕಾರವಿದ್ದು, ಒಂದು ವರ್ಷಕ್ಕಿಂತ ಮೇಲ್ಪಟ್ಟ ಪರೀಕ್ಷಾರ್ಥ ಸೇವಾವಧಿಯನ್ನು ವಿಸ್ತರಿಸಲು ರಾಜ್ಯಪಾಲರು ಅಥವಾ ಸರ್ಕಾರಕ್ಕೆ ಅಧಿಕಾರವಿರುತ್ತದೆ ಎಂದಿರುತ್ತದೆ.

ಹಾಗೂ ಕರ್ನಾಟಕ ನಾಗರೀಕ ಸೇವೆ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಾವಳಿಗಳನ್ನು ಸರ್ಕಾರವು ಜಾರಿಗೆ ತಂದಿರುವುದರಿಂದ ಹಾಗೂ ಅವುಗಳನ್ನು ಯಥಾವತ್ತಾಗಿ ಪಾಲಿಕೆಯು ಅಳವಡಿಸಿಕೊಂಡಿರುವುದರಿಂದ ಮೇಲ್ಕಂಡ ಪರೀಕ್ಷಾರ್ಥ ನೌಕರರ ಪರೀಕ್ಷಾರ್ಥ ಸೇವಾವಧಿ ಘೋಷಿಸುವಲ್ಲಿ ಸದರಿಕ ನಿಯಮಾವಳಿಗಳಂತೆ ಕಂಪ್ಯೂಟರ್ ಸಾಕ್ಷರತೆಯನ್ನು ಸಹ ಪರಿಗಣಿಸುವ ಅಗತ್ಯತೆಯಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳು ಸುಮಾರು 3 ವರ್ಷಗಳಿಂದ 16 ವರ್ಷಗಳವರೆಗೆ ಇಲಾಖಾ ಪರೀಕ್ಷೆಗಳನ್ನು ನಿಗದಿತ ಅವಧಿಯೊಳಗೆ ತೇರ್ಗಡೆ ಹೊಂದದೇ ಇದ್ದು, ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಿಕೊಳ್ಳದ ಒಟ್ಟು 63 ಅಧಿಕಾರಿ / ನೌಕರರುಗಳು ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಲು ಕರ್ನಾಟಕ ನಾಗರೀಕ ಸೇವೆ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಾವಳಿಗಳ ಷರತ್ತುಗಳಪಡಿಸಿ, ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಹೊಂದಿರುವ ದಿನಾಂಕಗಳಿಂದ ಕನಿಷ್ಠ ವೇತನಕ್ಕೆ ನಿಗಧಿಪಡಿಸಿ, ಪರೀಕ್ಷಾರ್ಥ ಸೇವಾವಧಿಯನ್ನು ಘೋಷಿಸಬಹುದೇ ಎಂಬುದರ ಬಗ್ಗೆ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17–07–2015ರ ಟಿಪ್ಪಣಿ.

**<u>ತೀರ್ಮಾನ</u>: "ಘೋಷಿಸಲು ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು